ಸಿಗುವುದಿದ್ದರೆ ನಾವು ಕೊಡುತ್ತೇವೆ, ಹುದ್ದೆ ಸಿಗದೆ ಇದ್ದರೆ ನಿಯಮಾವಳಿಯನ್ನು ಮೀರಿ ಕೊಡುವುದಿಲ್ಲ ಎಂದು ಹೇಳುತ್ತೇವೆ.

ಅಪ್ರಾಪ್ತ ವಯಸ್ಸಿನವರು ಎಲ್ಲಾದರೂ ಅರ್ಜಿಯನ್ನು ಹಾಕಬೇಕಾದ ಪರಿಸ್ಥಿತಿ ಬಂದಾಗ ವರ್ಷದೊಳಗೆ ಅವರು ಅರ್ಜಿಯನ್ನು ಸಲ್ಲಿಸಿ ಸೌಲಭ್ಯವನ್ನು ಪಡೆದುಕೊಳ್ಳಬಹುದು ಎಂಬುದು ನಿಯಮಾವಳಿ. ಈ ನಿಯಮಾವಳಿಯನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಈ ನಿಯಮಾವಳಿ ಪ್ರಕಾರ ಅನುಕಂಪದ ಆಧಾರದ ಮೇಲೆ ಈಗಾಗಲೇ ನೌಕರಿ ಕೊಡುತ್ತಿದ್ದೇವೆ. ಇನ್ನೂ ಕೊಡಬೇಕಾಗಿರುವುದನ್ನೂ ಕೂಡ ಪರಿಶೀಲಿಸಿ ಆ ನಿಯಮದ ಅಡಿಯಲ್ಲಿ ಕೊಡುತ್ತೇವೆ.

ಶ್ರೀ ಬಿ. ಶಿವರಾಮ್ : ಈಗ ಅವರು ಹೇಳಿದ್ದೆಲ್ಲಾ ಸತ್ಯ. ಆದರೆ ಕೆ. ಎ. ಟಿ. ಯವರು ಹಿಂದೆ ವಜಾ ಮಾಡಿದ ಅರ್ಜಿಗಳು ಇದ್ದವಲ್ಲ ಅವುಗಳ ಗತಿ ಏನು? ಈಗಿನ ನಿಯಮದ ಪ್ರಕಾರ ಒಂದು ವರ್ಷ ಎಂದು ಮಾಡಿದ್ದೀರಿ. ಹಿಂದೆ 5 ವರ್ಷ ಎಂದು ಇತ್ತು. ಆ ಕಾಲದಲ್ಲಿ ಪೆಂಡಿಂಗ್ ಅರ್ಜಿಗಳನ್ನು ಏನು ಮಾಡುತ್ತೀರಿ? ಈಗ ಅವರಿಗೆ ಏನೆಂದು ಎಂಡಾರ್ಸ್‌ಮೆಂಟ್ ಕೊಡುತ್ತಿದ್ದಾರೆ ಎಂದರೆ, ನೀವು ಒಂದು ವರ್ಷದಳೊಗೆ ಈ ಕಾನೂನು ಪ್ರಕಾರ ಅರ್ಜಿ ಹಾಕಿಲ್ಲದೆ ಇರುವುದರಿಂದ ನಿಮ್ಮ ಅರ್ಜಿಗಳನ್ನು ತಿರಸ್ಕೃತ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಎಂ. ಸಿ. ನಾಣಯ್ಯ : ಇದರಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲ. ನಿಯಮಾವಳಿಗಳನ್ನು ನಾವು ಬಹಳ ಚೆನ್ನಾಗಿ ರಚನೆ ಮಾಡಿದ್ದೇವೆ. 5 ವರ್ಷದೊಳಗೆ ಬಂದಿರುವ ಎಲ್ಲಾ ಅರ್ಜಿಗಳಿಗೂ ಸಹ ನಾವು ಈ ನಿಯಮದ ಅಡಿಯಲ್ಲಿ 3 ತಿಂಗಳೊಳಗೆ ಪರಿಹಾರ ಕಂಡುಹಿಡಿದು ಸೌಲಭ್ಯ ಒದಗಿಸುತ್ತೇವೆ. ನಾವು ಮೂರು ಸಲ ವಿಚಾರ ಮಾಡಿ ಜಾರಿಗೆ ತಂದಿದ್ದೇವೆ.

ಅ) : ಕೆ. ಇ. ಬಿ. ಅಧ್ಯಕ್ಷರು 17-1-97ರಂದು ಸುತ್ತೋಲೆ ಹೊರಡಿಸಿರುವುದು.

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ದಿನಾಂಕ 17-1-97 ರಂದು ಒಂದು ಸುತ್ತೋಲೆಯನ್ನು ಇಲಾಖಾ ಅಧಿಕಾರಿಗಳಿಗೆ ಕಳುಹಿಸಿ ವಿದ್ಯುತ್ ಕಡಿತ ಇರದ ಸಂದರ್ಭದಲ್ಲಿ ಒಂದು ತಿಂಗಳಲ್ಲಿ ಎಷ್ಟು ವಿದ್ಯುತ್ ಖರ್ಚಾಗುತ್ತಿತ್ತು, ಅದಕ್ಕಿಂತ ಜಾಸ್ತಿ ವಿದ್ಯುತ್ತನ್ನು ಪೂರೈಕೆ ಮಾಡಬಾರದೆಂದು ಹೇಳಿದ್ದಾರೆ ಮತ್ತು ಆದೇಶವನ್ನು ಪಾಲಿಸದ ಇಂಜಿನಿಯರ್ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಪಂಪ್‌ಗಳ ಬಳಕೆ ಕೇವಲ ಜನವರಿಯಿಂದ ಮೇ ತಿಂಗಳವರೆಗೆ ಮಾತ್ರ ಆಗುತ್ತಿದ್ದು ಉಳಿದ ಸಮಯದಲ್ಲಿ ಮನೆಬಳಕೆಗೆ ಮಾತ್ರ ಉಪಯೋಗ ಮಾಡುತ್ತಿದ್ದು ಈ ಸುತ್ತೋಲೆಯಿಂದ ರೈತರು ಯಾವುದೇ ಪಂಪ್ ಚಾಲನೆ ಮಾಡದಂಥಹ ಪರಿಸ್ಥಿತಿಯಲ್ಲಿದ್ದಾರೆ. ಮಳೆಗಾಲದಲ್ಲಿ ಮಾತ್ರ ಪವರ್‌ಕಟ್ ಇಲ್ಲದ ಕಾರಣ ಆ ಮಳೆಗಾಲದ ಸಂದರ್ಭದಲ್ಲಿ ಇಲ್ಲದ ಪವರ್‌ಕಟ್ ಅನ್ನು ಈ ತಿಂಗಳಿಗೂ ಕೂಡ ಸೀಮಿತ ಮಾಡಿದರೆ ಒಂದು ತಾಲ್ಲೂಕಿನಲ್ಲಿ ಒಂದು ದಿವಸ ಕೂಡ ವಿದ್ಯುತ್ ಪಂಪ್‌ಗಳನ್ನು ರನ್ ಮಾಡುವ ಪರಿಸ್ಥಿತಿಯಲ್ಲಿ ರೈತರು ಇಲ್ಲ. ತಕ್ಷಣ ಸರ್ಕಾರ ಈ ಬಗ್ಗೆ ಗಮನ ಹರಿಸಿ ಕೆ. ಇ. ಬಿ.

ಅಧ್ಯಕ್ಷರು ಕಳುಹಿಸಿದ ಸುತ್ತೋಲೆಯಲ್ಲಿ ವಿದ್ಯುತ್ ಕಡಿತ ಇಲ್ಲದ ಸಂದರ್ಭದ ತಿಂಗಳಿನ ಆಧಾರದ ಮೇಲೆ ಕಟ್ ಮಾಡದೆ ಜನವರಿಯಿಂದ ಮೇ ತಿಂಗಳಿನವರೆಗಿನ ಆಧಾರದ ಮೇಲೆ ವಿನಿಯೋಗಿಸುವುದಕ್ಕೆ ಅವಕಾಶ ಮಾಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಂಬಂಧಪಟ್ಟ ಒಂದು ಪ್ಯಾರಾವನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಓದಲು ಇಚ್ಛಿಪಡುತ್ತೇನೆ. "You are well aware of the poor availabillity of adequate of power as of now. However, some of the areas seem to show higher consumption compared to the non - power cut dates. This is not at all desirable and acceptable. We will be forced to hold the concerned Executive Engineer as well as the Assistant Executive Engineers responsible for this state of affairs and punish them summarily. I appreciate the tensions and pressures but yilding to them will not be either in the interest of KEB nor the State nor the Consumer in the long run" ಎಂದು ಹೇಳಿದ್ದಾರೆ. ಯಾವುದೇ ಒಬ್ಬ ರೈತ ಇವತ್ತು ಮಳೆಗಾಲದಲ್ಲಿ ಅಂದರೆ ಅಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ಪಂಪ್ ರನ್ ಮಾಡುತ್ತಿಲ್ಲ. ಆ ತಿಂಗಳಿನ ಪವರ್ ಕಟ್ ಅನ್ನು ಒಂದು ತಿಂಗಳಿಗೆ ಸೀಮಿತವಾಗಿ ಇಟ್ಟುಕೊಂಡು ಅಷ್ಟೇ ಯೂನಿಟ್ಟನ್ನು ಪ್ರೊವೈಡ್ ಮಾಡಿದರೆ ಕರ್ನಾಟಕ ರಾಜ್ಯದ ಯಾವುದೇ ರೈತ ಪಂಪ್ ಚಾಲನೆ ಮಾಡುವ ಪರಿಸ್ಥಿತಿಯಲ್ಲಿಲ್ಲ. ಅದಕ್ಕೆ ಈ ಸುತ್ತೋಲೆಯನ್ನು ಏನು ಕೆ. ಇ. ಬಿ. ಅಧ್ಯಕ್ಷರು ಅವರಿಗೆ ತಿಳುವಳಿಕೆ ಇಲ್ಲದೆ ಕೊಟ್ಟಿದ್ದಾರೆ ಅದನ್ನು ತಕ್ಷಣ ವಿತ್‌ಡ್ರಾ ಮಾಡಬೇಕು. ಜನವರಿಯಿಂದ ಮೇ ತಿಂಗಳವರೆಗಿನ ಮಧ್ಯದಲ್ಲಿ ಆ ತಿಂಗಳಲ್ಲಿ ಎಷ್ಟು ಪವರ್ ಆ ಗ್ರಾಮಾಂತರ ಪ್ರದೇಶದಲ್ಲಿ ಉಪಯೋಗವಾಗುತ್ತಿತ್ತು ಆ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದವರಲ್ಲಿ ತಮ್ಮ ಮೂಲಕ ಆಗ್ರಹಪಡಿಸುತ್ತೇನೆ.

12.00 ಪಿ. ಎಂ.

ಶ್ರೀ ಶರಣಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಮೇಲೆ ಆ ಭಾಗದಲ್ಲಿ ಕೆ. ಇ. ಬಿ. ಯ ಅಧ್ಯಕ್ಷರು ಹೊರಡಿಸಿರುವಂತಹ ಸುತ್ತೋಲೆ ಬಗ್ಗೆ ಈಗ ತಾನೇ ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತರಿಸಿ, ಮಾನ್ಯ ಸದಸ್ಯರಿಗೆ ಒಂದು ವರದಿಯಲ್ಲಿ ಸಲ್ಲಿಸಿ ಅಲ್ಲಿಯ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ. ಕೆ. ಇ. ಬಿ. ಯವರು ಯಾವ ರೀತಿಯ ತೊಂದರೆ ಕೊಡದಿರುವಂತೆ ನೋಡಿಕೊಳ್ಳುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಆದಷ್ಟು ಶೀಘ್ರ ನಾನು ಆ ಕೆಲಸ ಮಾಡುತ್ತೇನೆ.

ಶ್ರೀ ಡಿ. ವಿ. ಸದಾನಂದಗೌಡ : ಕಳೆದ 15 ದಿವಸಗಳಿಂದ ನಮ್ಮ ಊರಿನಲ್ಲಿ ಎಲ್ಲಾ ಕಡೆ ರಾತ್ರಿ ವೇಳೆ ಕರೆಂಟೇ ಇರುವುದಿಲ್ಲ. ರೈತರು ತಮ್ಮ ಪಂಪ್‌ಸೆಟ್ಟುಗಳನ್ನು ಬಂದ್ ಮಾಡುವಂತಹ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಆ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಈ) : 1987-88 ರಿಂದ 94ರ ವರೆಗೆ ಪ್ರಾರಂಭವಾದ ಸಂಸ್ಕೃತ ಪಾಠಶಾಲೆಗಳಿಗೆ ಅನುದಾನ.

ಅಧ್ಯಕ್ಷರು : ಮಾನ್ಯ ಗೋವಿಂದೇಗೌಡರು ನನ್ನ ಅನುಮತಿ ಪಡೆದು ಸದನಕ್ಕೆ ಗೈರು ಹಾಜರಾಗಿದ್ದಾರೆ. ಆದರೂ ಪರವಾಗಿಲ್ಲ, ಮಾನ್ಯ ಅಂಬಕಗಟ್ಟಿಯವರು ತಮ್ಮ ವಿಷಯ ಪ್ರಸ್ತಾವಿಸಿ.

ಶ್ರೀ ಶ್ರೀಕಾಂತ ಅಂಬರಗಟ್ಟಿ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ, ಸರ್ಕಾರವು 1993-94ರ ಸಾಲಿನ ನಂತರ ಪ್ರಾರಂಭವಾದ ಸಂಸ್ಕೃತ ಪಾಠಶಾಲೆಗಳಿಗೆ ಅನುದಾನ ನೀಡುತ್ತಿದೆ. ಆದರೆ 1987-88 ರಿಂದ 94ರವರೆಗೆ ಪ್ರಾರಂಭವಾದಂಥ ಸುಮಾರು 90 ಸಂಸ್ಕೃತ ಪಾಠಶಾಲೆಗಳಿಗೆ ಅನುದಾನವನ್ನು ಕೊಡುತ್ತಿಲ್ಲ. ಸಂಸ್ಕೃತ ಪಾಠಶಾಲೆಗಳಲ್ಲಿ ಎಲ್ಲಿ ಅನುದಾನ ಇಲ್ಲವೋ ಅಂತಹ ಪಾಠಶಾಲೆಗಳಲ್ಲಿ ಫೀ ಸಂಗ್ರಹಿಸಲಿಕ್ಕೆ ಕೂಡ ಅವಕಾಶ ಇಲ್ಲದಂತಾಗಿದೆ. ಎಲ್ಲೆಲ್ಲಿ ಬೇಡಿಕೆ ಇರುತ್ತದೆಯೋ ಅಲ್ಲಿ ಬೇರೆ ಬೇರೆ ಪಾಠಶಾಲೆಗಳನ್ನು ಸರ್ಕಾರ ಪ್ರಾರಂಭ ಮಾಡುತ್ತದೆ. ಆದರೆ ಸಂಸ್ಕೃತ ಪಾಠಶಾಲೆಗಳನ್ನು ಇವತ್ತು ಖಾಸಗಿ ಆಡಳಿತ ಮಂಡಳಿಗಳವರೇ ನಡೆಸುತ್ತಿದ್ದಾರೆ. ಸಂಸ್ಕೃತ ನಮ್ಮ ಪುರಾತನ ಭಾಷೆ, ಭಾರತೀಯ ಸನಾತನ ಸಂಸ್ಕೃತಿಯ ಸಂಪತ್ತಿನ ಪ್ರತೀಕವಾಗಿರುವಂತಹ ಈ ಭಾಷೆಯನ್ನು ಉಳಿಸಬೇಕು, ಬೆಳೆಸಬೇಕು ಎಂದು ವಿಶ್ವ ಮಟ್ಟದ ಸಂಸ್ಕೃತ ಪಾಠಶಾಲೆಗಳನ್ನೂ ಕೂಡ ಅನುದಾನಕ್ಕೆ ಒಳಪಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ. ನನಗೆ ತಿಳಿದ ಮಟ್ಟಿಗೆ ಈ ಸಂಸ್ಕೃತಿ ಭಾಷೆಯ ಅಭಿವೃದ್ಧಿಗಾಗಿ ಇಟ್ಟಂತಹ ಅನುದಾನದಲ್ಲಿ ಸಂಪೂರ್ಣವಾದ ಹಣ ಬಳಕೆಯಾಗದೇ ಲ್ಯಾಪ್ಸ್ ಆಗಿರುವಂತಹದ್ದು ಕಂಡು ಬಂದಿದೆ. ಅದಕ್ಕಾಗಿ ಈ ಒಂದು ಸನಾತನ ಸಂಸ್ಕೃತಿಯ ಪ್ರತೀಕವಾದ ಭಾಷೆಯ ಎಲ್ಲಾ ಶಾಲೆಗಳನ್ನು ದಯವಿಟ್ಟು ಅನುದಾನಕ್ಕೆ ಒಳಪಡಿಸಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1994ನೇ ಇಸವಿಯಿಂದ ಶುರುವಾದಂತಹ ಶಾಲೆಗಳಿಗೆ ಅನುದಾನವನ್ನು ಕೊಡುತ್ತಿದ್ದಾರೆ. 1997-88 ರಿಂದ 1994ರ ಮಧ್ಯದಲ್ಲಿ ಇರತಕ್ಕಂತಹ ಸಂಸ್ಕೃತ ಪಾಠ ಶಾಲೆಗಳಿಗೆ ಅನುದಾನವನ್ನು ಕೊಡುತ್ತಿಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಈ ವಿಚಾರವನ್ನು ನಾನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತಂದು ಅವರಿಂದ ಒಂದು ಹೇಳಿಕೆಯನ್ನು ಸದನದಲ್ಲಿ ಕೊಡಿಸುತ್ತೇನೆ ಎಂದು ಭರವಸೆ ನೀಡುತ್ತೇನೆ.

ಉ) : ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಖಾಯಂ ಮಾಡುವುದು

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಸುಮಾರು 15-20 ವರ್ಷಗಳಿಂದ ಬಡವರು ಇಡೀ ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಆದರೆ ನಗರಸಭೆ ಬೆಳೆದಂತೆಲ್ಲಾ ಈಗ 5 ಕಿ. ಮೀ. ವ್ಯಾಪ್ತಿಯೊಳಗೆ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವಂತಹ ಬಡವರಿಗೆ ಅದನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎನ್ನುವಂತಹ